ಶ್ರೀಮತಿ ಮೋಟಮ್ಮ.— ಅಲ್ಲಿ ಎಷ್ಟು ಜನ ಗಿರಿಜನರು ಇದ್ದರು, ಎಷ್ಟು ಜನ ಹರಿಜನರು ಇದ್ದರು ಎಂಬುದು ನನಗೆ ಗೊತ್ತಿದೆ. ನಾನು ಅದೇ ಊರಿನವಳು, ನಾನು ೨೯ ವರ್ಷಗಳಿಂದ ನೋಡುತ್ತಿದ್ದೇನೆ. ಅಲ್ಲಿ ಇದ್ದವರು ಎಷ್ಟು ಜನ ಎಂಬುದನ್ನು ಹೇಳುತ್ತಿದ್ದಾರೆ, ನಾನು ಕೇಳುವ ಪ್ರಶ್ನೆ ಅರ್ಥವಾಗಲಿಲ್ಲ ಎರಡನ್ನೂ ಕನ್‌ಫ್ಯೂಸ್ ಮಾಡಿಕೊಂಡು ಹೇಳುತ್ತಿದ್ದಾರೆ ಹಸಲರ ಮೂರು ಕುಟುಂಬಗಳು ನಾನು ಹುಟ್ಟಿದಾಗಿನಿಂದಲೂ ಇದ್ದಾರೆ. ಇವರನ್ನು ಬಿಟ್ಟು ಉಳಿದ ೧೪ ಕುಟುಂಬಗಳಿಗೆ ಜಮೀನು ಕೊಟ್ಟಿದ್ದೀರಿ, ಮನೆ ಕಟ್ಟಿಸಿಕೊಟ್ಟಿದ್ದೀರಿ, ಟ್ರೈಬಲ್ ಸ್ಕೀಂ ಪ್ರಕಾರ ಕಮ್ಯೂನಿಟಿ ವೆಲ್ ತೆಗೆಸಿಕೊಟ್ಟಿದ್ದೀರಿ, ಇವರು ಎಲ್ಲಿಂದ ಬಂದರು ? ಮಂಗ್ಳಲಮಕ್ಕಿಯಲ್ಲೆ ವಾಸವಾಗಿದ್ದರೆ ಅವರ ಕಸುಬೇನಾಗಿತ್ತು ? ಗಿರಿಜನರು ಎನ್ನುವುದಕ್ಕೆ ಅವರ ಒಂದು ಕಸುಬಿನಿಂದ ಗುರುತಿಸುತ್ತಾರೆ, ಅದೇನಾದರೂ ಇದೆಯೇ ಎಂದು ಪ್ರಶ್ನೆ ಮಾಡುತ್ತಿದ್ದೇನೆ.

ಅಧ್ಯಕ್ಷರು.— ನಾಯಕರು ಎಂದಮೇಲೆ ಅವರು ಸೌತ್ ಕೆನರಾದಿಂದ ಬಂದಿದ್ದಾರೆ.

ಶ್ರೀಮತಿ ಮೋಟಮ್ಮ.— ಅವರು ಗಿರಿಜನರು ಅಲ್ಲದೆ ಇರುವುದರಿಂದ ಅವರಿಗೆ ಗಿರಿಜನರ ಸ್ಕೀಂ ಪ್ರಕಾರ ಹಣ ಖರ್ಚು ಮಾಡಿರುವುದು ಮಿಸ್‌ಯೂಸ್ ಮಾಡಿದಂತಾಗುವುದಿಲ್ಲವೇ ?

ಅಧ್ಯಕ್ಷರು.— ೨೫ ವರ್ಷಗಳಿಂದ ಇರತಕ್ಕವರಿಗೆ ಏನು ಅನುಕೂಲ ಮಾಡಿಕೊಟ್ಟಿಲ್ಲ, ಎಲ್ಲಿಂದಲೋ ಬಂದವರಿಗೆ ಅನುಕೂಲಮಾಡಿಕೊಟ್ಟಿದ್ದೀರಿ ಎಂದು ಅವರು ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಪಿ. ವೆಂಕಟರಮಣ.— ಇವರಿಗೆ ಮನೆ ಕಟ್ಟಿಕೊಡಬೇಕೆಂದು ಶಿಫಾರಸ್ಸು ಮಾಡಿದ್ದೇವೆ ಎಂದು ಹೇಳಿದ್ದೇನೆ.

ಅಧ್ಯಕ್ಷರು.—ಇವರಿಗೆ ಶಿಫಾರಸ್ಸು ಮಾಡುತ್ತೀರಿ,ಆದರೆ ಮಂಗಳೂರಿನಿಂದ ಬಂದವರಿಗೆ ಈಗಾಗಲೇ ಕಟ್ಟಿಕೊಟ್ಟಿದ್ದೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಪಿ. ವೆಂಕಟರಮಣ.— ಅದು ನನಗೆ ಗೊತ್ತಿಲ್ಲ. ನನ್ನಲ್ಲಿರತಕ್ಕ ಅಂಕಿಅಂಶಗಳಿಂದ ಇಷ್ಟು ಹೇಳಿರುತ್ತೇನೆ.

ಶ್ರೀಮತಿ ಮೋಟಮ್ಮ.— ಅದು ನಿಮಗೆ ಗೊತ್ತಿಲ್ಲ. ನಿಮ್ಮ ಅಧಿಕಾರಿಗಳು ನಿಮಗೆ ಏತಕ್ಕೆ ತಿಳಿಸಿಲ್ಲ ? ಅವರು ಯಾವ ಪ್ರಭಾವದಿಂದ ಈ ಕೆಲಸ ಮಾಡಿದ್ದಾರೆ. ಒರಿಜಿನಲ್ ಟ್ರೈಬ್ಸ್‌ನ್ನು ಬಿಟ್ಟು ಬಿಟ್ಟು ಎಲ್ಲಿಂದಲೋ ಬಂದವರಿಗೆ ಪ್ರೋತ್ಸಾಹ ಕೊಡುವುದಾದರೆ ನಿಮ್ಮ ಅಧಿಕಾರಿಗಳು ಏನು ಕೆಲಸ ಮಾಡುತ್ತಾರೆ ? ಇದನ್ನು ಮಾನ್ಯಮಂತ್ರಿಗಳು ಯೋಚನೆ ಮಾಡಬೇಕು ?

ಶ್ರೀ ಪಿ. ವೆಂಕಟರಮಣ.— ಅದನ್ನು ಬೇಕಾದರೆ ತನಿಖೆ ಮಾಡಿಸುತ್ತೇನೆ.

ಶ್ರೀಮತಿ ಮೋಟಮ್ಮ.— ತನಿಖೆ ಆಷ್ಟೆ ಅಲ್ಲ, ಅಲ್ಲಿ ಏನು ಅನ್ಯಾಯವಾಗಿದೆ ಎಂಬುದನ್ನು ಸರಿಪಡಿಸಿ ಅದನ್ನು ಸದನದ ಮುಂದೆ ಇಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ವೆಂಕಟರಮಣ.— ಆಗಬಹುದು.

ಅಧ್ಯಕ್ಷರು.— ಅದು ಸಭೆಯ ಮುಂದೆ ಇಡುವಂತಹ ವಿಷಯವಲ್ಲ, ವಿಷಯವನ್ನು ಸದಸ್ಯರೇ ಯವರಿಗೆ ತಿಳಿಸಿ.

Drh ght conditions due to lack of Rain

408 SRI R. C. BALEKUNDARGI (Bailhongal):—Will the Minister of State for Major & Medium Irrigation be pleased to state :—

(a) whether it has come to the notice of the Government that Murugod, Leechanur Kutaranatra, Hirevendanur and Chikkabudanur Villages of Bailhongal Constituency are experiencing drought regularly due to lack of rain in time .

(b) whether any representations have been received for construction of tank by providing bunds across Hirehalla running near Kutaranatra and to supply water to the said villages ;

(c) whether any preliminary survey has been conducted for this scheme ;

(d) if conducted, its approximate expenditure and the year in which work would be taken up ?

SRI B. B. CHIMMANAKATTI (Minister of State for Major and Medium Irrigation).—

(a) Muragod, Kutaranatra, Hirebudanur and Chikkabudanur Villages in Bailhongal Constituency have been experienced drought in the year 1980-81.

(b) No representations were received by this Institution regarding construction of tank to Hirehalla near Kutaranatra.

(c) This question does not arise. But preliminary scrutiny has been made regarding construction of tank to Hirehalla near Chikkabidanur, about a mile away from Kutaranatra.

(d) Approximate cost of expenditure of tank construction Scheme near Chikkabidanur Village is Rs. 35.17 lakhs. The question of commencement of work is under consideration of Government.

ಶ್ರೀ ಜಿ. ಕೆ ತಕ್ಕೇದ್.—ಈಗ ನಮ್ಮ ಸೌಂದತ್ತಿ ತಾಲ್ಲೂಕ್‌ಗೆ ಸೇರಿದ ಯರಗಟ್ಟಿ ಪ್ರದೇಶದಲ್ಲಿ ಮೇಲಿಂದ ಮೇಲೆ ಬರಗಾಲ ಬರುವುದರಿಂದ ಅಲ್ಲಿ ಮಲಪ್ರಭಾ ಯೋಜನೆಯ ಕೆಳಗೆ ಲಿಫ್ಟ್ ಇರಿಗೇಷನ್ ಕೆಲಸವನ್ನು ಕೈಕೊಂಡಿದ್ದಾರೆ. ಆದಕಾರಣ ಈ ಕೆಲಸವನ್ನು ಜಾಗ್ರತೆ ಮಂಗಿಸುವುದರ ಮೂಲಕ ನೀರನ್ನು ಯಾವಾಗ ಪೂರೈಕೆ ಮಾಡುತ್ತೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದರ ಕೆಲಸವನ್ನು ಆದಷ್ಟೂ ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಕೆ. ತಕ್ಕೇದ್.—ಚಿಕ್ಕಬಿದನೂರು ಗ್ರಾಮದ ಬಳಿ ಕೆರೆಕಟ್ಟುವ ಯೋಜನೆಯ ಅಂದಾಜು ವೆಚ್ಚ ರೂ ೩೫.೧೭ ಲಕ್ಷ ಎಂದು ಹೇಳಿದ್ದೀರಿ. ಇದರಿಂದ ಎಷ್ಟು ಎಕರೆಗಳಿಗೆ ನೀರಾವರಿಯಾಗಂತ್ತದೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೯೭೦ ಹೆಕ್ಟಾರ್‌ಗಳಿಗೆ ನೀರಾವರಿಯಾಗಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಜಿ. ಕೆ. ತಕ್ಕೇದ್. ಸೌಂದತ್ತಿ ತಾಲ್ಲೂಕ್‌ನ ಮುರಗೋಡು, ಸೋಮಪುರ ಹಾಗೂ ಇನ್ನಿತರ ಭಾಗಗಳಲ್ಲಿ ಜನರು ಪದೇ ಪದೇ ಬರಗಾಲದ ಬವಣೆಗೆ ತುತ್ತಾಗುತ್ತಿರುವುದರಿಂದ, ಅಲ್ಲಿ ಯಾವ ರೀತಿಯ ಶಾಶ್ವತ ಪರಿಹಾರ ಕಾರ್ಯಗಳನ್ನು ಕೈಕೊಳ್ಳುತ್ತೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಬೇಕು.

Export of cotton bales to foreign countries from Karnataka.

496 SRI M. G. JARATARGAR (Hubli).—Will the Chief Minister be pleased to state.—

(a) the number of bales of cotton exported by the Indian Cotton Corporation to foreign Countries from Karnataka during the year 1980-81 ; and its value and the names of Countries to which it has been exported ;